ಚಂದ್ರಕಾಂತ ಕರದಳ್ಳಿಯವರಿಗೂ 'ಸುಧಾ' ಪತ್ರಿಕೆಗೂ ಹಳೆಯ ನಂಟು. ಅವರ ಅನೇಕ ಬರಹಗಳು 'ಸುಧಾ'ದ ಮಕ್ಕಳ ಪುಟದಲ್ಲಿ ಪ್ರಕಟಗೊಂಡಿವೆ. ಕೊನೆಯುಸಿರೆಳೆಯುವುದಿಕ್ಕೆ ಒಂದು ದಿನ ಮೊದಲಷ್ಟೇ ಅವರು ತಮ್ಮ ಕವಿತೆಯೊಂದನ್ನು 'ಸುಧಾ'ಕ್ಕೆ ಕಳುಹಿಸಿದ್ದರು. ಆ ಕವಿತೆ ಇಲ್ಲಿದೆ, ಕರದಳ್ಳಿಯವರಿಗೆ ಶ್ರದ್ಧಾಂಜಲಿ ರೂಪದಲ್ಲಿ.

# ಚಳಿಗಾಲ

ಚಳಿಯ ಕಾಲ ಬಂದಿಹುದು
ಗಡ ಗಡ ನಡುಗು ತಂದಿಹುದು
ಗಿಡಗಳ ಎಲೆ ಉದುರಿಹುದು
ಮೈ-ಕೈ ಸುಕ್ಕುಗಟ್ಟಿಹುದು.

ಹಗಲು ಕಾಲ ಕಡಿಮೆ ಇಹುದು
ಇರುಳು ಕಾಲ ಹೆಚ್ಚು ಇಹುದು
ಬಿಸಿಲು ಬೇಕು, ಎನುತಿಹುದು
ಚಳಿಯ ಕಾಸಲು ಬಯಸುತಿಹುದು.

ಓಣಿಯ ಮಕ್ಕಳು ಕೂಡುತಿಹರು
ಕಸದ ಪಾಲು ಹಾಕಿ ಕಾಸುತಿಹರು
ಹಿರಿಯರು ಬಂದು ಕೂಡುತಿಹರು
ದಾರಿಹೋಕರು ಬರುತಿಹರು.

ಚಳಿಗಾಲ ಎಂದರೆ ನಡುಗುತಿಹರು
ಬೇಸಿಗೆ ಬಂದರೆ ಸೆಕೆ ಎನುತಿಹರು
ಮಳೆ ಬಂದರೆ ಬಿಡುತ್ತಿಲ್ಲ ಶನಿ ಎಂದರು
ಯಾವ ಕಾಲ ಬಂದರು ಬೇಸರಿಸುತಿಹರು.

ಒಂದೊಂದು ಕಾಲವು ಬಲು ಬೇಸರ
ಇಲ್ಲ ನೋಡು ಯಾವುದೇ ಆಸರ
ಬದುಕು ಎಂಬುದು ಬಲು ಮೋಜುಗಾರ
ಕಳೆಯಬೇಕು ಹೀಗೆಯೇ ಬದುಕಿನ ಭಾರ.



ಪದವಿ ಪಡೆದಿದ್ದರೂ, ಶಾಲಾ ಶಿಕ್ಷಕರಾಗಿಯೇ ನಿವೃತ್ತರಾದರು. ಮೂವತ್ತಮೂರು ವರ್ಷಗಳ ಕಾಲ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳಿಗೆ ಪಾಠ ಹೇಳಿದ್ದ ಅವರು, ಪಠ್ಯದ ಜೊತೆಗೆ ಬದುಕಿನ ಚೆಲುವು ಹೆಚ್ಚಿಸುವ ಸಾಹಿತ್ಯದ ರುಚಿಯನ್ನೂ ವಿದ್ಯಾರ್ಥಿಗಳಿಗೆ ಪರಿಚಯಿಸುತ್ತಿದ್ದರು.

ಮಕ್ಕಳ ಸಾಹಿತ್ಯದ ಜೊತೆಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕರದಳ್ಳಿ ಅವರ ಪರಿಶ್ರಮವನ್ನು ಗುರ್ತಿಸಬಹುದು. ಗ್ರಂಥ ಸಂಪಾದಕರಾಗಿ, ಸಂಘಟಕರಾಗಿಯೂ ಪ್ರಸಿದ್ಧರಾಗಿದ್ದ ಅವರಿಗೆ ಶರಣ ಸಾಹಿತ್ಯದಲ್ಲೂ ಆಸಕ್ತಿಯಿತ್ತು. ಹೀಗೆ, ಹಲವು ಮರದ ಹಣ್ಣು ತಿನ್ನುವ ಹಕ್ಕಿಯಂತಿದ್ದರೂ ಅವರ ಮುಖ್ಯ ಒಲವು ಮಕ್ಕಳ ಸಾಹಿತ್ಯದ ಬಗೆಗೇ ಇತ್ತು.

ಗ್ರಾಮೀಣ ಭಾಗಗಳ ಮಕ್ಕಳಿಗೆ ಕನ್ನಡದ ಕೃತಿಗಳನ್ನು ಓದುವ ಆಸೆಯಿದ್ದರೂ, ಕೊಳ್ಳುವ ಸಾಮರ್ಥ್ಯ ಕಡಿಮೆ. ಇಂಥ ಕನ್ನಡಪ್ರೀತಿಯ ಮಕ್ಕಳಿಗೆಂದೇ ಕರದಳ್ಳಿಯವರು ತಮ್ಮ ಕವಿತೆಗಳನ್ನೊಳಗೊಂಡ ಏಳೆಂಟು ಪುಟಗಳ ಪುಸ್ತಿಕೆಗಳನ್ನು ಸಿದ್ಧಪಡಿಸಿ ಮಕ್ಕಳಿಗೆ ಹಂಚುತ್ತಿದ್ದರು. ಅದೊಂದು ಬಗೆಯಲ್ಲಿ ಸಾಹಿತ್ಯದ ಪರಿಚಾರಿಕೆ.

ಶಿಕ್ಷಕರಾಗಿ ಹಾಗೂ ಮಕ್ಕಳ ಸಾಹಿತಿಯಾಗಿ ಅವರದು ಗಮನಾರ್ಹ ಸಾಧನೆ. ಶಿಕ್ಷಕನಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದ 'ಉತ್ತಮ ಶಿಕ್ಷಕ' ಪ್ರಶಸ್ತಿ ಪಡೆದಿದ್ದ ಅವರು, ಮಕ್ಕಳ ಸಾಹಿತ್ಯದ ಸಾಧನೆಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ 'ಬಾಲ ಸಾಹಿತ್ಯ ಪುರಸ್ಕಾರ' ಪಡೆದಿದ್ದರು. ಸುರಪುರದಲ್ಲಿ ನಡೆದ ಪ್ರಥಮ ಮಕ್ಕಳ ಸಾಹಿತ್ಯ ಸಮ್ಮೇಳನ (2010) ಅಧ್ಯಕ್ಷರಾಗಿದ್ದುದು ಅವರ ಮಕ್ಕಳ ಪ್ರೀತಿಗೆ ಸಂದ ಗೌರವದಂತಿತ್ತು.

ಹೈದರಾಬಾದ್ ಕರ್ನಾಟಕ ಪ್ರದೇಶ ಕಥೆಗಾರರಿಗೆ ಪ್ರಸಿದ್ಧವಾದುದು. ಆ ಭಾಗದ ಬಿಸಿಲನ್ನೂ, ಜನಸಮುದಾಯದ ಅಂತರಂಗದ ಬೆಳದಿಂಗಳನ್ನೂ ಕಥೆಗಳಾಗಿ ಮೊಗೆದುಕೊಟ್ಟು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಬರಹಗಾರರು ಸಾಕಷ್ಟು ಮಂದಿಯಿದ್ದಾರೆ. ಆದರೆ, ಮಕ್ಕಳ ಸಾಹಿತ್ಯದಲ್ಲಿ ಎದ್ದುಕಾಣಿಸುವಂತಹವರು ಹೆಚ್ಚು ಮಂದಿಯೇನೂ ಇಲ್ಲ. ಹಾಗಾಗಿಯೇ, ಮಕ್ಕಳ ಬರವಣಿಗೆಗಾಗಿ ಕರದಳ್ಳಿಯವರು 'ಬಾಲ ಸಾಹಿತ್ಯ ಪುರಸ್ಕಾರ' ಪಡೆದಾಗ, ಈ ಗೌರವ ಪಡೆದ ನಮ್ಮ ಭಾಗದ ಮೊದಲ ಸಾಹಿತಿ ಎಂದು ಹೈದರಾಬಾದ್ ಕರ್ನಾಟಕ ಸಂಭ್ರಮಿಸಿತ್ತು. ಕಳೆದ ನವೆಂಬರ್‌ನಲ್ಲಿ 'ರಾಜ್ಯೋತ್ಸವ ಪ್ರಶಸ್ತಿ' ಪುರಸ್ಕಾರವೂ ಅವರಿಗೆ ಸಂದಿತ್ತು. ಹೀಗೆ ಪ್ರಶಸ್ತಿಯುಗಳದ ಸಂಭ್ರಮದ ಸಿಹಿ ಇನ್ನೂ ಜೀವಂತವಾಗಿರುವಾಗಲೇ ಕರದಳ್ಳಿ ಅವರು ಜೀವನಯಾತ್ರೆ ಮುಗಿಸಿದ್ದಾರೆ.

ಕೊನೆಯುಸಿರೆಳೆಯುವ ದಿನದಂದೇ ಚಂದ್ರಕಾಂತ ಕರದಳ್ಳಿಯವರು ಶಿಕ್ಷಣ ಸಚಿವರನ್ನು ಭೇಟಿಯಾಗಿ ತಮ್ಮ ಮಕ್ಕಳ ಕೃತಿಯೊಂದನ್ನು ಅವರಿಗೆ ನೀಡಿದ್ದಾರೆ. ಸಚಿವರು ಓದುವರೋ ಇಲ್ಲವೋ, ಕನ್ನಡದ ಮಕ್ಕಳಂತೂ ಕರದಳ್ಳಿಯವರನ್ನು ಅಗತ್ಯವಾಗಿ ಓದಬೇಕು. ಹಾಗೆ ಓದುವುದು ಮಕ್ಕಳ ಸಾಹಿತಿಗೆ—ಮೇಷ್ಟ್ರಿಗೆ ಸಲ್ಲುವ ಅತ್ಯುತ್ತಮ ಗೌರವವೂ ಹೌದು.